# ಕನ್ನಡ ರಾಜ್ಯೋತ್ಸವ

## ಪ್ರಶಸ್ತಿ ಪ್ರದಾನ ಸಮಾರಂಭ ೧೯೮೨

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ನೃಪತುಂಗ ರಸ್ತೆ
ಬೆಂಗಳೂರು–೫೬೦ ೦೦೨



# ಡಾ|| ಸಿದ್ದಯ್ಯ ಪುರಾಣಿಕ

ಸಮರ್ಥ ಆಡಳಿತಗಾರ, ಪ್ರತಿಭಾವಂತ ಕವಿ ಈ ಎರಡೂ ಗುಣಗಳನ್ನು ಒಂದೇ ವ್ಯಕ್ತಿಯಲ್ಲಿ ಕಾಣಬೇಕೆಂದೆನಿಸಿದಾಗ ನಮ್ಮ ಕಣ್ಣೆದುರು ಕಾಣಿಸುವವರು ಡಾ|| ಸಿದ್ದಯ್ಯ ಪುರಾಣಿಕ.

1918 ರಲ್ಲಿ ರಾಯಚೂರು ಜಿಲ್ಲೆಯ ಎಲಬುರಗಿ ತಾಲ್ಲೂಕಿನ ದ್ಯಾಂಪುರ ಹಳ್ಳಿಯಲ್ಲಿ ಹುಟ್ಟಿದ ಸಿದ್ದಯ್ಯ ಪುರಾಣಿಕರ ಮನಸ್ಸಿನ ಮೇಲೆ ಸಾಹಿತ್ಯಿಕ ವಾತಾವರಣವನ್ನು ಬೀರಿದವರು ಅವರ ತಂದೆ ಕವಿರತ್ನ ಕಲ್ಲಿನಾಥ ಶಾಸ್ತ್ರಿಗಳು. ಹೈದರಾಬಾದ್ ಸಂಸ್ಥಾನದಲ್ಲಿ ಉರ್ದು ಪ್ರಾಬಲ್ಯವಿದ್ದಾಗಲೂ ಕನ್ನಡದ ಕೆಚ್ಚನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದದ್ದು ಡಾ|| ಸಿದ್ದಯ್ಯನವರ ವೈಶಿಷ್ಟ್ಯ. ಹುಟ್ಟೂರಿನಲ್ಲಿಯೇ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣಕ್ಕಾಗಿ ಕುಕ್ಕನೂರಿನ ವಿದ್ಯಾನಂದ ಗುರುಕುಲ ಸೇರಿಕೊಂಡರು. ಕಲಬುರಗಿಯ ಸರ್ಕಾರೀ ಕಾಲೇಜಿನಲ್ಲಿ ಇಂಟರ್‌ವರೆಗೆ ಶಿಕ್ಷಣ. ಮುಂದೆ ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಬಿ.ಎ. ಹಾಗೂ ಎಲ್.ಎಲ್.ಬಿ ಪದವಿ ಪಡೆದರು. ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದವರೆಗೂ ಪ್ರಥಮ ಶ್ರೇಣಿ ತಪ್ಪಿಸಿಕೊಳ್ಳಲಿಲ್ಲ. ಹೀಗಾಗಿ ವಿದ್ಯಾರ್ಥಿ ವೇತನ ನಿರಂತರವಾಗಿ ಲಭಿಸುತ್ತಾ ಬಂದಿತು. ಆಂಗ್ಲ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಯಾವಾಗಲೂ ಪ್ರಥಮ ಸ್ಥಾನ. ಆಗಿನ ರಾಜಭಾಷೆ ಉರ್ದು ಕೂಡ ಇವರಿಗೆ ಕರಗತ.

1943 ರಲ್ಲಿಯೇ ತಹಸೀಲ್ದಾರ್‌ರಾಗಿ ಸರ್ಕಾರೀ ನೌಕರಿ ಪ್ರಾರಂಭ, ಪೊಲೀಸ್ ಕಾರ್ಯಾಚರಣೆಯ ಮೊದಲು ನಾಂದೇಡ ಕಲಬುರುಗಿಗಳಲ್ಲಿ

ಸೇವೆ. ತದನಂತರ 1955ರ ವೇಳೆಗೆ ಹೈದರಾಬಾದಿನಲ್ಲಿ ಅಸಿಸ್ಟೆಂಟ್ ಸೆಟ್ಲಮೆಂಟ್ ಕಮಿಶನರ್, ಕಂದಾಯ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿ, ಮುಂದೆ ಡೆಪ್ಯೂಟಿ ಕಲೆಕ್ಟರ್. ರಾಜ್ಯ ಪುನರ್ರಚನೆ ಆಗುವವರೆಗೂ ಹೈದರಾಬಾದ್ ರಾಜ್ಯದಲ್ಲಿ ವಿವಿಧ ಹುದ್ದೆಗಳ ಜವಾಬುದಾರಿಯನ್ನು ಹೊತ್ತು, ಸಮರ್ಥ ಆಡಳಿತಗಾರರೆನ್ನುವ ಖ್ಯಾತಿಪಡೆದರು. ಆಗಲೇ ಐದು ರಾಷ್ಟ್ರೀಯ ವಿಸ್ತರಣಾ ಯೋಜನೆಗಳನ್ನು ಯಶಸ್ವಿಗೊಳಿಸಿದ ಸಾಧನೆ ಇವರದು. ರಾಜ್ಯ ಪುನರ್ವಿಂಗಡಣೆಯ ನಂತರ ಬೆಂಗಳೂರಿನ ಸಚಿವಾಲಯದಲ್ಲಿ ವಿಧ್ಯಾ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿಗಳಾಗಿ, ಮುಂದೆ ಉಪ-ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು. ಆ ನಂತರ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರಾಗಿ, ಸರ್ಕಾರದ ಹಣಕಾಸು ಇಲಾಖೆಯ ಉಪ ಕಾರ್ಯದರ್ಶಿಗಳಾಗಿ, ಸುವರ್ಣ ನಿಯಂತ್ರಣ ಅಧಿಕಾರಿಗಳಾಗಿ, ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿ, ಸಾರಿಗೆ ಕಮಿಶನರ್ ಆಗಿ, ಕೊನೆಯಲ್ಲಿ ಕರ್ನಾಟಕ ರಾಜ್ಯದ ಕಾರ್ಮಿಕ ಕಮಿಶನರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದರು.

ಸರ್ಕಾರೀ ಸೇವೆಯ ವಿವಿಧ ಹುದ್ದೆಗಳನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಿ ಒಳ್ಳೇ ಹೆಸರನ್ನು ಪಡೆದ ಡಾ॥ ಸಿದ್ದಯ್ಯ ಪುರಾಣಿಕರು, ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠ ಕವಿಗಳಾಗಿಯೂ ಮಿಂಚಿದರು. ಅದಕ್ಕಾಗಿಯೇ ಜನರು ಅವರನ್ನು ಕವಿ ಹೃದಯದ ಅಧಿಕಾರಿಗಳೆಂದೇ ಗುರುತಿಸುತ್ತಿದ್ದರು. ಕವಿ ಹೃದಯವನ್ನು ಹೊಂದಿದ ಸಿದ್ದಯ್ಯ ಪುರಾಣಿಕರು, ಮಲಪ್ರಭಾ ಆಣೆಕಟ್ಟಿಗೆ ನೀರು ತುಂಬತೊಡಗಿದಾಗ ಮುಳುಗಡೆ ಪ್ರದೇಶದ ಜನರನ್ನು ಸುರಕ್ಷಿತ ಸ್ಥಾನಕ್ಕೆ ನಿರ್ದಿಷ್ಟ ಅವಧಿಗೆ ಮುಂಚೆಯೇ ಸ್ಥಳಾಂತರಿಸಿ, ಎಲ್ಲರ ಮೆಚ್ಚುಗೆಯನ್ನು ಪಡೆದರು.

ಶಿಕ್ಷಣ ಪಡೆಯುತ್ತಿರುವಾಗಲೇ ಹಲವು ಸಂಘ-ಸಂಸ್ಥೆಗಳ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮೈಸೂರು ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿ, ಬೀದರ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿ ದೆಹಲಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಕನ್ನಡ ಭವಿತವ್ಯ ಗೋಷ್ಠಿಯ ಅಧ್ಯಕ್ಷರಾಗಿ, ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡ ಭಾಷೆಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಮಿತಿಯ ಸದಸ್ಯರೂ ಆಗಿ ಸೇವೆ ಸಲ್ಲಿಸಿದ್ದಾರೆ



ಇವರ ಸಾಹಿತ್ಯ ಸೇವೆಯನ್ನು ಗಮನಿಸಿದ ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು. ರಾಜ್ಯ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ ನೀಡಿದೆ. ಇವರ 'ಮಾನಸ ಸರೋವರ'ಕ್ಕೆ ರಾಜ್ಯ ಸರ್ಕಾರದ ಬಹುಮಾನ ಲಭಿಸಿದೆ. 'ತುಪ್ಪಾರೊಟ್ಟಿ ಗೆಗೆಗೆ'ಕ್ಕೆ ಕೇಂದ್ರ ಸರ್ಕಾರದ ಬಹುಮಾನ ಬಂದಿದೆ. ಇವರ 'ವಚನೋದ್ಯಾನ'ಕ್ಕೆ ರಾಜ್ಯಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಗ್ರಂಥ ಬಹುಮಾನ ದೊರೆತಿದೆ. ಕಲಕತ್ತಾದ ಭಾರತೀಯ ಭಾಷಾ ಪರಿಷತ್ತಿನ ಭಿಲ್ವಾರಾ ಬಹುಮಾನ ಇವರಿಗೆ ಲಭಿಸಿದ್ದು ಕನ್ನಡಕ್ಕೆ ಹೆಮ್ಮೆಯ ವಿಷಯವಾಗಿದೆ.

